



ಶಬರಿ!

ಗೇಟಿನ ಪಕ್ಕ ಬರೆದಿದ್ದ ಹೆಸರು ಓದಿಕೊಂಡು, ಹಸಿರು ಹುಲ್ಲಿನ ನೆಲ ದಾಟಿ ಮನೆಯೊಳಗೆ ಅಡಿಯಿಟ್ಟ ಹಾಗೆ ದೇವರ ಪೀಠವೂ ಅದರ ಮೇಲೆ ಸುಬ್ಬಯ್ಯ ನಾಯ್ಡು ದಂಪತಿ ಫೋಟೊವೂ ಎದುರಾಯ್ತು. ಕುಳಿತ ಸೋಫಾದ ಎದುರಿಗೆ ಗೋಡೆಯ ಮೇಲಿನ ಲೋಕೇಶ್, ಗಿರಿಜಾ ಲೋಕೇಶ್, ಸುಬ್ಬಯ್ಯ ನಾಯ್ಡು, ಅವರ ಕುಟುಂಬದ ಇನ್ನೂ ಕೆಲವು ಚಿತ್ರಗಳು ಕೆಳಗಡೆ ಸೃಜನ್ ಲೋಕೇಶ್ ಚಿತ್ರಗಳೆಲ್ಲ ಫ್ರೇಮಿನಲ್ಲಿ ಬಂದಿಯಾಗಿ ನಮ್ಮನ್ನೇ ನೋಡುತ್ತಿದ್ದವು. ಸೂರಿನಿಂದ ಸುರಿಯುತ್ತಿದ್ದ ಬೆಳಕು ಆ ಚಿತ್ರಗಳನ್ನೂ ನಮ್ಮನ್ನೂ ಸಮನಾಗಿ ನೇವರಿಸಿ ನಮ್ಮನ್ನೂ ಆ ವಾತಾವರಣದ ಫ್ರೇಮ್ ಒಳಗಡೆ ಕೂಡಿಸಿಬಿಟ್ಟಿದ್ದವು. ತಮ್ಮ ಎಂದಿನ ನಗುಮೊಗವನ್ನು ಹೊತ್ತು ಬಂದು ಆ ಚಿತ್ರಗಳ ಕೆಳಗಿನ ಸೋಫಾದಲ್ಲಿ ಕೂತರು ಗಿರಿಜಾ ಲೋಕೇಶ್. ಅವರ ಕಣ್ಣುಗಳಲ್ಲಿ ಎಪ್ಪತ್ತರ ದಣಿವಿರಲಿಲ್ಲ. ಭಾರವಾಗಿ ಕಾಣಿಸುವ ಆ ವಯಸ್ಸಿನ ಸಂಖ್ಯೆಯನ್ನು ಹೂಹಗುರವಾಗಿ ಊದಿಬಿಟ್ಟು ಸಂಭ್ರಮಿಸುವ ಇಪ್ಪತ್ತರ ಹುಡುಗಿಯ ಹೊಳಪಿತ್ತು. ಮಾತು ಶುರುವಾದಮೇಲಂತೂ ಕಾಲ ಒಮ್ಮೆಲೆ ಹಿಮ್ಮೊಗ ಚಲಿಸಲಾರಂಭಿಸಿತ್ತು.



◆ **ಹೊಸದಾಗಿ ಏನ್ ಮಾಡ್ತಿದೀರಿ?**

'ಸತ್ಯ' ಅನ್ನೋ ಧಾರಾವಾಹಿಯಲ್ಲಿ ನಟಿಸುತ್ತಿದ್ದೇನೆ. ಮತ್ತೆ ಒಂದಿಷ್ಟು ಸಿನಿಮಾಗಳಿವೆ. ಎಂಟು ತಿಂಗಳು ಮನೆಯಲ್ಲಿಯೇ ಕೂತು ಕೂತು ಬೇಜಾರಾಗಿ, ಹೊರಗಡೆ ಹೋದ್ರೆ ಸಾಕು ಅನಿಸ್ತಿತ್ತು. ನಾನು ದುಡಿಯಲು ಶುರುಮಾಡಿದ ದಿನದಿಂದ ಹೀಗೆ ಎಂಟು ತಿಂಗಳು ವಿಶ್ರಾಂತಿ ತೆಗೆದುಕೊಂಡಿದ್ದು ಇದೇ ಮೊದಲ ಬಾರಿಗೆ.

◆ **ಮುನ್ನೂರಕ್ಕೂ ಹೆಚ್ಚು ಧಾರಾವಾಹಿಗಳಲ್ಲಿ, ಅಷ್ಟೇ ಸಿನಿಮಾಗಳಲ್ಲಿಯೂ ನಟಿಸಿದ್ದೀರಲ್ಲವೇ?**

ಹೌದು. ಅವುಗಳ ಹೆಸರೆಲ್ಲ ನನಗೆ ನೆನಪಿಲ್ಲ. ಸುಮಾರು ಸಿನಿಮಾಗಳನ್ನು ನೋಡಿದಾಗ, 'ಅರೆ, ಈ ಸಿನಿಮಾ ನಾನು ಯಾವಾಗ ಮಾಡಿದ್ದೆ?' ಎಂದು ನನಗೇ ಅಚ್ಚರಿಯಾಗುವುದೂ ಇದೆ. ನನಗೆ ಆಯಾ ಸಿನಿಮಾ ಕೆಲಸ ಮುಗಿಯುತ್ತಿದ್ದ ಹಾಗೆ ಅದು ಮರೆತೇ ಹೋಗುತ್ತದೆ. ಡೈಲಾಗ್‌ಗಳೂ ಅಷ್ಟೆ, ನನಗೆ ಕೊಟ್ಟ ಕೂಡಲೇ ಹೇಳ್ತೀನಿ. ಆದರೆ ಆ ದೃಶ್ಯ ಮುಗಿದು ಇನ್ನೊಂದು ದೃಶ್ಯದ ಚಿತ್ರೀಕರಣ ಶುರುವಾದರೆ ಹಿಂದಿನ ದೃಶ್ಯದ ಡೈಲಾಗ್ ಮರೆತೇಹೋಗಿರುತ್ತದೆ. ಅಲ್ಲಲ್ಲೇ ಮಾಡಿ ಮರೆತುಬಿಡುವುದು ನನ್ನ ಸ್ವಭಾವ. ಹಾಗಾಗಿ ನನಗೆ ಜೀವನ ಪ್ರತಿಕ್ಷಣವೂ ಹೊಸ ಹೊಸ ಹೊಸದಾಗಿಯೇ ಕಾಣಿಸುತ್ತಿರುತ್ತದೆ.

◆ **ಎಪ್ಪತ್ತು ವರ್ಷದ ಮೆಟ್ಟಿಲಲ್ಲಿ ಹಿಂದೆ ತಿರುಗಿ ನೋಡಿದಾಗ ಹಳೆಯ ನೆನಪುಗಳು ಹೇಗೆ ಕಾಣಿಸುತ್ತಿವೆ?**

ಇಂದಿನ ಖುಷಿಯೇ ಹಿಂದೆಯೂ ಕಾಣಿಸುತ್ತದೆ. ಬದುಕಿನಲ್ಲಿ ಬಂದ ಕಷ್ಟಗಳನ್ನೆಲ್ಲ ನಾನು ಯಾವತ್ತೂ ಕಷ್ಟ ಎಂದು ತೆಗೆದುಕೊಂಡೇ ಇಲ್ಲ.

◆ **ಕೆಲಸಕ್ಕಾಗಿ ಕಲೆಯ ವಲಯವನ್ನೇ ಯಾಕೆ ಆರಿಸಿಕೊಂಡಿರಿ?**

ಇದು ನಾನು ಆರಿಸಿಕೊಂಡಿದ್ದಲ್ಲ. ಅಮ್ಮ ನಮಗೆ ಸೈಕ್ಲಿಂಗ್, ಡಾನ್ಸು, ಸಂಗೀತ ಎಲ್ಲವನ್ನೂ ಕಲಿಸಿದರು. ನಾನು ನೃತ್ಯ ಕಲಿಯಲು ಹೋದೆ. ಸಿ.ವಿ. ಶಿವಶಂಕರ್ ನನ್ನ ಗುರುಗಳು. ನಂತರ ಮಾಸ್ಟರ್ ಶಿವರಾಮ್, ಸುಂದರ್ ಅವರ ಬಳಿಯೂ ಕಲಿತೆ. ಸುರೇಶ್ ಮಾಸ್ಟರ್ ಅನ್ನುವವರು ಕಥಕ್ ಡಾನ್ಸ್ ಹೇಳಿಕೊಟ್ಟರು. ನನ್ನನ್ನು ಡಾನ್ಸ್ ಮಾಸ್ಟರ್‌ಗಳು ಅವರ ಕಾರ್ಯಕ್ರಮಗಳಲ್ಲಿ ನೃತ್ಯ ಮಾಡಲು ಕರೆಯಲಾರಂಭಿಸಿದರು. ಅವರೇ ಯಾವ ಡಾನ್ಸ್ ಮಾಡಬೇಕು ಎಂದು ಕಲಿಸಿಕೊಡುತ್ತಿದ್ದರು. ದುಡ್ಡೂ ಕೊಡುತ್ತಿದ್ದರು. ಹೀಗಾಗಿ ನಾನು ಎಲ್ಲವನ್ನೂ ಕಲಿತೆ.

◆ **ನಾಟಕಗಳಲ್ಲಿ ಅಭಿನಯಿಸಲು ಶುರುಮಾಡಿದ್ದು ಯಾವಾಗ?**

ರಂಗಭೂಮಿಗೂ ನೃತ್ಯಗಾರ್ತಿಯಾಗಿಯೇ ಬಂದಿದ್ದು ನಾನು. ಈಶ್ವರ ಗೌಡ ಅನ್ನುವವರು ಅವರ ನಾಟಕ ಮಂಡಳಿಗೆ ಒಬ್ಬ ನೃತ್ಯಗಾರ್ತಿಯನ್ನು ಹುಡುಕುತ್ತಿದ್ದರು. ನಮ್ಮ ತಂದೆ ನನ್ನನ್ನು ಅಲ್ಲಿಗೆ ಸೇರಿಸಿದರು. ಆರು ತಿಂಗಳಿಗೆ ಇನ್ನೂರೈವತ್ತು ರೂಪಾಯಿ ಸಂಬಳ. ಆಗ ಅದು ದೊಡ್ಡ